ನೀರಿನ ದರವನ್ನು ಕನಿಷ್ಟ ಪಕ್ಷ ರೂ. 45 ರಂತೆ ನಿಗದಿಪಡಿಸಿರುವುದರಿಂದ ಮತ್ತು ಸದರಿ ದರದಲ್ಲಿ ವಸೂಲಿ ಕೆಲಸ ನಡೆಸಿರುವುದರಿಂದ ನಾಗರೀಕರು ತುಂಬಾ ಆರ್ಥಿಕ ಹೊರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ತೊಂದರೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಕರ್ನಾಟಕ ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೂ (ಹುಬ್ಬಳ್ಳಿ-ಧಾರವಾಡ ಸೇರಿ) ಸಮನ್ವಯಿಸುವಂತೆ ಏಕರೂಪ ನೀರಿನ ದರ ಜಾರಿಗೆ ತಂದಿದ್ದು, ಇದರ ಪ್ರಕಾರ ಮೀಟರ್ ಅಳವಡಿಸುವವರೆಗೆ ಪ್ರತಿ ತಿಂಗಳು ನೀರಿನ ಸಂಪರ್ಕವೊಂದಕ್ಕೆ ಗೃಹ ಬಳಕೆಗೆ ರೂ. 45.00 ದರವನ್ನು ಜಾರಿಗೆ ತರಲಾಗಿದೆ. ನಗರ ಪ್ರದೇಶಗಳಲ್ಲಿನ ನೀರಿನ ದರಗಳನ್ನು ಹಲವಾರು ವರ್ಷಗಳಿಂದ ಪರಿಷ್ಕರಿಸದೆ ಇದ್ದು ನಿರಂತರವಾಗಿ ಏರುತ್ತಿರುವ ನಿರ್ವಾಹಣಾ ವೆಚ್ಚಗಳನ್ನು ಹಾಗೂ ಹೊಸ ಯೋಜನೆಗಳನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿಯನ್ನು. ಗಮನದಲ್ಲಿಟ್ಟುಕೊಂಡು ಈ ಹೊಸ ನೀರಿನ ದರಗಳನ್ನು ಜಾರಿಗೆ ತರಲಾಗಿದೆ ಹಾಗೂ ಈ ನೀರಿನ ದರಗಳನ್ನು ಲಾಭ ಮತ್ತು ನಷ್ಟವಿಲ್ಲದ ಆಧಾರದ ಮೇಲೆ ನಿರ್ಧರಿಸಲಾಗಿದೆ.

ಹಿಂದುಳಿದ ವರ್ಗಗಳಿಗೆ ನಿಗದಿಪಡಿರುವ ಆದಾಯ ಮಿತಿ

2257 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೀಸಲಾತಿ ಮತ್ತಿತರ ಸವಲತ್ತುಗಳನ್ನು ಹಿಂದುಳಿದ ವರ್ಗಗಳಿಗೆ ನೀಡುವಾಗ ನಿಗದಿ ಪಡಿಸಿರುವ ಗರಿಷ್ಟ ಆದಾಯದ ಮಿತಿ ಎಷ್ಟು? ಅಂದು ಇಂದಿನ ಏರಿಕೆಯ ಪ್ರಮಾಣಕ್ಕೆ ಸರಿಯಾಗಿದೆಯೇ?

ಆ) ಕೇಂದ್ರ ಹಾಗೂ ಇತರೆ ರಾಜ್ಯಗಳಲ್ಲಿ ಇದೇ ವರ್ಗಗಳಿಗೆ ನಿಗಧಿ ಪಡಿಸಿರುವ ಆದಾಯಮಿತಿಯು ಹೆಚ್ಚು ಇದ್ದು ರಾಜ್ಯದಲ್ಲಿ ಕಡಿಮೆ ಇರುವುದರಿಂದ ದೇಶದಲ್ಲಿನ ಒಂದೇ ವರ್ಗದ ಜನರಿಗೆ ತಾರತಮ್ಯವನ್ನು ತೋರಿದಂತಾಗುವುದಿಲ್ಲವೇ?

ಇ) ಅದನ್ನು ಸರಿಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಈ) ಕೇಂದ್ರ ಸರ್ಕಾರದವರು ಹಿಂದುಳಿದ ವರ್ಗಗಳಿಗೆ ನಿಗಧಿ ಪಡಿಸಿರುವ ಗರಿಷ್ಟ ಆದಾಯ ಮಿತಿಯನ್ನು ರಾಜ್ಯದಲ್ಲಿಯೂ ನಿಗಧಿಪಡಿಸಿ ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡಿಕೊಡಲು ಸರ್ಕಾರವು ಸಕಾಲಿಕ ಕ್ರಮವನ್ನು ಕೈಗೊಳ್ಳುವುದೇ?

ಶ್ರೀ ಮಾಲೀಕಯ್ಯ ವಿ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಿಂದ) :

ಅ) ಸರ್ಕಾರಿ ಆದೇಶ ಸಂಖ್ಯೆ : ಸಕಇ 150 ಬಿಸಿಎ 94, ದಿನಾಂಕ : 17-9-94 ಮತ್ತು ಸಕಇ 251 ಬಿಸಿಎ 94 ದಿನಾಂಕ :31-1-1995ರನ್ವಯ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳನ್ನು ಹೊರತುಪಡಿಸಿ, ರಾಜ್ಯಾಧೀನ ಸೇವೆಗಳಲ್ಲಿನ : ಹಾಗೂ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಗಳಲ್ಲಿನ ಹಾಗೂ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳಲ್ಲಿನ ಮತ್ತು ಸರ್ಕಾರದ ಅನುದಾನಿತ : ರಾಜ್ಯ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿನ, ನೇಮಕಾತಿ ಮೀಸಲಾತಿ ಸೌಲಭ್ಯ ಪಡೆಯಲು ಕ್ರಿಮಿಲೇಯರ್ ನೀತಿಯನ್ನು ಅನುಸರಿಸಲಾಗುತ್ತಿದೆ.

ಅ) ಅಭ್ಯರ್ಥಿ : ತಂದೆ : ತಾಯಿ : ಪೋಷಕರು, ಸರ್ಕಾರದ ಒಂದನೇ ದರ್ಜೆಯ ಅಥವಾ ಎರಡನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ದಿಮೆಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ ಅಥವಾ ಖಾಸಗಿ ಕೈಗಾರಿಕೆ : ಸಂಸ್ಥೆಗಳ ಉದ್ಯೋಗಿಯಾಗಿದ್ದು ಎರಡನೇ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ (ವೇತನ ಶ್ರೇಣಿ ರೂ. 2050-3050)

ಆ) ಅಭ್ಯರ್ಥಿ : ತಂದೆ : ತಾಯಿ : ಪೋಷಕರು ಆದಾಯ ತೆರಿಗೆ ನಿರ್ಧರಣೆಗೆ ಒಳಪಡುವವರಾಗಿದ್ದರೆ.

ಇ) ಅಭ್ಯರ್ಥಿ : ತಂದೆ : ತಾಯಿ : ಪೋಷಕರು ಮಾರಾಟ ತೆರಿಗೆ ನಿರ್ಧರಣೆಗೆ ಒಳಪಡುವವರಾಗಿದ್ದರೆ.

ಈ) ಅಭ್ಯರ್ಥಿ : ತೆಂದೆ : ತಾಯಿ : ಪೋಷಕರು ಇವರಲ್ಲಿ ಯಾರೊಬ್ಬರು ಅಥವಾ ಇಬ್ಬರು ಸೇರಿ 8 ಹೆಕ್ಟೇರ್ ಮಳೆಯಾಧಾರಿತ ಅಥವಾ ಒಣಭೂಮಿ ಅಥವಾ ತತ್ಸಮಾನವಾದ ಇತರೆ ಜಮೀನನ್ನು ಹೊಂದಿದ್ದರೆ.

ಉ) ಅಭ್ಯರ್ಥಿ : ತಂದೆ : ತಾಯಿ : ಪೋಷಕರು ಸಂಪತ್ತು ನಿರ್ಧರಣೆಗೆ ಒಳಪಡುವವರು ಮೀಸಲಾತಿ ಪಡೆಯಲು ಅರ್ಹರಿರುವುದಿಲ್ಲ.

2. ಸರ್ಕಾರದ ಆದೇಶ ಸಂಖ್ಯೆ: ಸಕಇ 5 ಬಿಸಿಎ 95, ದಿನಾಂಕ : 1-9-95ರನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪ್ರವರ್ಗ-1ರ ಅಭ್ಯರ್ಥಿಗಳನ್ನು ಹೊರತುಪಡಿಸಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಲು ವಾರ್ಷಿಕ ಆದಾಯ ಮಿತಿಯನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

ಅ) ಶುಲ್ಕ ವಿನಾಯಿತಿ ರೂ. 11,000-00

ಆ) ವಿದ್ಯಾರ್ಥಿವೇತನ, ಪಡೆಯಲು ವಿದ್ಯಾರ್ಥಿನಿಲಯಗಳ ಪ್ರವೇಶ, ಆಶ್ರಮ ಶಾಲೆಗಳ ಪ್ರವೇಶ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಇನ್ನಿತರ ಯೋಜನೆಗಳ ಸೌಲಭ್ಯಕ್ಕೆ ರೂ. 15,000-00.

ಇ. ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 47 : ಬಿಸಿಎ 92, ದಿನಾಂಕ :13.7.96ರನ್ವಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿಗಮಗಳಿಂದ ಸಾಲಸೌಲಭ್ಯ ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಾರ್ಷಿಕ ಆದಾಯ ರೂ. 22,000-00 ಗಳಿಗೆ ನಿಗಧಿಪಡಿಸಿದೆ.

ಅ, ಆ ಮತ್ತು ಇ) ಮೇಲ್ಕಂಡ ಕ್ರಿಮಿಲೇಯರ್ ಪದ್ಧತಿಯನ್ನು ರಾಜ್ಯದಲ್ಲಿನ ಆರ್ಥಿಕ ಮಟ್ಟದ ಆಧಾರದ ಮೇಲೆ ಅಳವಡಿಸಿಕೊಳ್ಳಲಾಗಿದೆ. ಇದರ ಉದ್ದೇಶವು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರಿಗಾಗಿ ನೀಡಲಾಗುತ್ತಿರುವ ಸೌಲಭ್ಯಗಳು ಬಡವರಲ್ಲಿ ಕಡು ಬಡವರಿಗೆ ತಲುಪಬೇಕೆಂಬುದಾಗಿದೆ.

Filling up of the Vacancies of Novadaya School at Bilahongala Town

2261 - Sri. Mahanthesh S. Koujalgi (Bylahongal) : Will the Minister for Social Welfare be pleased to state?

a) *When Navodaya School for SCs/STs was started at Bylahongal?*

b) *Whether it is true that at the time of starting the school Government have sanctioned the required posts.*

c) *If so, whether the posts have been filled as sanctioned in the Govt. order?*

d) *If not, what are the reasons?*

e) *Whether Government will take action against the officers who have not taken action to fill up the posts even though the posts have been sanctioned by the Government?*

Sri. K.M. Krishna Reddy (Minister for Social Welfare) :

a) & b) Navodaya School at Bylahongal was started on 5-7-93. Governement in their order No. SWL 247 SEW 91, dated 22-11-93 have sanctioned the required posts to this institution.

c) The posts of Principal and the Teacher cadres have been filled by deputation. One post of FDA has been filled by promotion. For the time being, though the post of staff nurse has not been filled, arrangements have been made